2)	ಖಬ್ರಸ್ತಾನ ಸ ನಂ 4704, ಸತಮಾವತ್ತೊರ – ಕಂಪೌಂಡ್ ನಿರ್ಮಾಣಕ್ಕಾಗಿ	1,00,000–00
3)	ಖಬ್ರಸ್ತಾನ ಸರ್ವೆ ನಂ 7 ಗಂಗಗೊಡಿಹಳ್ಳಿ ಗ್ರಾಮ ಕೂಧಗೆರೆ, ಕುಣಿಗಲ್ ತಾಲ್ಲೂಕು	1,50,000–00
4)	ಖಬ್ರಸ್ಥಾನ್ ಹೆಚ್ ಹೊಸಹಳ್ಳಿ ಗ್ರಾಮ, ಕೂಧಗೆರೆ ಹೋಬಳಿ, ಕುಣಿಗಲ್ ತಾಲ್ಲೂಕು	25,000–00

ಆ) ವಕ್ಫ ಸಂಸ್ಥೆಗಳಿಂದ ಅನುದಾನ ಬಿಡುಗಡೆಗಾಗಿ ಅರ್ಜಿ ಬಂದಂತೆ ಹಣದ ಲಭ್ಯತೆ ಆಧಾರದ ಮೇಲೆ ಅನುದಾನವನ್ನು ವಕ್ಫ ಸಂಸ್ಥೆಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುವುದು

1484 (2201) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್ ಕ್ಷೇತ್ರ ವ್ಯಾಪ್ತಿಯ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ತೀರಾ ಹದಗೆಟ್ಟಿರುವುದರಿಂದ ಅವುಗಳ ಅಭಿವೃದ್ಧಿಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ,

ಆ) ಹಾಗಿದಲ್ಲಿ, ಯಾವ ಅವಧಿಯೊಳಗಾಗಿ ಸದರಿ ರಸ್ತೆಗಳ ಡಾಂಬರೀಕರಣಕ್ಕೆ ಅನುದಾನ ಮಂಜೂರು ಮಾಡುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು

1486 (2203) ಶ್ರೀ ನಿಂಗಪ್ಪ ಹೆಚ್ (ಕುಣಿಗಲ್) – ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಿಂದ ಕುಣಿಗಲ್ ಕ್ಷೇತ್ರದ ವಡಾಘಟ್ಟದವರೆಗೆ ಬಸ್ ಮಾರ್ಗವನ್ನು ಮಂಜೂರು ಮಾಡಿ ಪ್ರಯಾಣಿಕರಿಗೆ ಸೌಕರ್ಯ ಕಲ್ಪಿಸಲು ಮಾಡಿರುವ ಮನವಿ ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಯಾವ ಅವಧಿಯೊಳಗಾಗಿ ಸೌಕರ್ಯ ಕಲ್ಪಿಸಲಾಗುವುದು?

ಶ್ರೀ ಎನ್ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಬಂದಿದೆ

ಆ) ಮೇ–2007

1487 (1895) ಶ್ರೀಮತಿ ಪರಿಮಳ ಕೆ ಎಸ್ (ಹನೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಹನೂರು ಪಟ್ಟಣ ಮತ್ತು ಮಾರ್ಗ ಮಧ್ಯದ ಏಳು ಹಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಕುಡಿಯುವ ನೀರಿನ ಪೂರೈಕೆ ಬಗ್ಗೆ ಪ್ರಸ್ತಾವನೆಯು ಈಗ ಯಾವ ಹಂತದಲ್ಲಿದೆ,

ಇ) ಹನೂರು ಮತ್ತು ಮಾರ್ಗ ಮಧ್ಯದ ಏಳು ಹಳ್ಳಿಗಳಿಗೆ ಕುಡಿಯುವ ನೀರಿನ ಪೂರೈಕೆಗೆ ಎಷ್ಟು ದಿನಗಳಲ್ಲಿ ಈ ಕಾಮಗಾರಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು?